1078 ಶ್ರೀ ನರೇಂದ್ರ ಬಾಬು ಸಿ.ಎ. : ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ಇತ್ತೀಚೆಗೆ ಮನೆಯ ಕಂದಾಯ ವಸೂಲಿ ಮಾಡಲು ಹೊಸ ನೀತಿಯನ್ನು ಜಾರಿ ಮಾಡಿರುವುದು ನಿಜವಲ್ಲವೆ;

ಆ) ಹಾಗಿದ್ದಲ್ಲಿ ಇದರಿಂದ ಸರ್ಕಾರಕ್ಕೆ ಹಾಗೂ ಯಾವ ರೀತಿ ಉಪಯೋಗವಾಗಿದೆ;

ಇ) ಸಾರ್ವಜನಿಕರು ಹೆಚ್ಚಿನ ತೆರಿಗೆ ನೀಡಿದ ತರುವಾಯ ಅಗತ್ಯ ಸೌಲಭ್ಯವನ್ನು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯವರು ನೀಡಲು ಕ್ರಮ ಕೈಗೊಂಡಿರುವರೇ;

ಈ) ಹೊಸ ನೀತಿಯ ಪ್ರಕಾರ ಮೂರು ವರ್ಷಗಳಿಗೊಮ್ಮೆ ಮನೆ ಕಂದಾಯವನ್ನು ಪರಿಷ್ಕರಣೆ ಮಾಡುತತಿರುವುದು ನಿಜವೇ;

ಉ) ಹಾಗಿದ್ದಲ್ಲಿ ಈ ನೀತಿಯನ್ನು ಬದಲಿಸಿ ಐದು ವರ್ಷಗಳಿಗೊಮ್ಮೆ ಮನೆ ಕಂದಾಯ ಪರಿಷ್ಕರಣೆ ಮಾಡುವ ಆಲೋಚನೆ ಸರ್ಕಾರಕ್ಕೆ ಇದೆಯೇ?

ಶ್ರೀ ಬಿ.ಎಸ್.ಯಡಿಯೂರಪ್ಪ (ಮುಖ್ಯಮಂತ್ರಿಯವರು) :

ಅ) ಹೌದು.

ಆ) 2007ನೇ ಸಾಲಿನಲ್ಲಿ 7 ಸಿ.ಎಂ.ಸಿ., 1 ಟಿ.ಎಂ.ಸಿ. ಮತ್ತು 110 ಹಳ್ಳಿಗಳು ಸೇರ್ಪಡೆಯಾಗಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಸ್ತಿತ್ವಕ್ಕೆ ಬಂದ ಕಾರಣ, ಹಳೇ ಪಾಲಿಕೆಯ ಪ್ರದೇಶದಲ್ಲಿ ಎಸ್.ಎ.ಎಸ್. ಪದ್ಧತಿಯಲ್ಲಿ ಸಿ.ಎಂ.ಸಿ. ಮತ್ತು ಟಿ.ಎಂ.ಸಿ. ಪ್ರದೇಶದಲ್ಲಿ ಸಿ.ವಿ.ಎಸ್. ಪದ್ಧತಿಯಲ್ಲಿ ಮತ್ತು 110 ಹಳ್ಳಿಗಳಲ್ಲಿ ಪಂಚಾಯತ್ ರಾಜ್ ಕಾಯ್ದೆಯನ್ವಯ ಆಸ್ತಿ ತೆರಿಗೆಯನ್ನು ಸಂಗ್ರಹ ಮಾಡಲಾಗುತ್ತಿತ್ತು. ತೆರಿಗೆ ಸಂಗ್ರಹ ಪದ್ಧತಿಯಲ್ಲಿ ಏಕರೂಪತೆ ಹೊಂದಲು, ಯೂನಿಟ್ ಏರಿಯಾ ವ್ಯಾಲ್ಯೂ (ಯು.ಎ.ವಿ.) ಆಧಾರಿತ ಹೊಸ ಪದ್ಧತಿಯನ್ನು 2008–09ನೇ ಸಾಲಿನಲ್ಲಿ ಜಾರಿಗೆ ತರಲಾಗಿದೆ. ಈ ಪದ್ಧತಿಯಲ್ಲಿ ಸ್ವತ್ತಿನ ಮಾಲಿಕರುಗಳು ತಾವೇ ಸ್ವಇಚ್ಛೆಯಿಂದ ಕಂದಾಯ ಘೋಷಿಸಿ ಪಾವತಿ ಮಾಡುವುದರಿಂದ ಆಡಳಿತಾತ್ಮಕ ವೆಚ್ಚವು ಕಡಿಮೆಯಾಗುತ್ತದೆ ಹಾಗೂ ಈ ಪದ್ಧತಿಯಿಂದ ಪಾಲಿಕೆಯ ಸಂಪನ್ಮೂಲ ಕೂಡ ಹೆಚ್ಚಾಗಿರುತ್ತದೆ.

ಇ) ಹೌದು.

ಈ) ಹೌದು.

ಉ) ಇಲ್ಲ.